ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

Saturday, the 30th January 1982 Magha 10, 1903. S.E.

The House met in the Assembly Chamber, Vidhana Soudha, at Nine of the Clock.

[MR. SPEAKER (SRI K. H. RANGANATH) in the Chair].

STARRED QUESTIONS
(to which oral answers were given)

Filling up of the Post of Chief Personnel Manager in K.S.R.T.C.

32. SHRI T. B. JAYACHANDRA (Kallambella).—Will the Minister for Transport and Minor Irrigation be pleased to state :-

(a) whether it is a fact that the Karnataka State Road Transport Corporation has advertised the post of Chief Personnel Manager ;

(b) if so, action taken to fill up the post ;

(c) if not, the reasons for the delay ?

SHRI M. M. J. SADYOJATHA (Minister for Transport and Minor Irrigation).—

(a) Yes.

(b) & (c) None of the applicants was found qualified as per qualifications prescribed in the Notification and therefore it is proposed for readvertisement.

ಶ್ರೀ ಟಿ. ಬಿ. ಜಯಚಂದ್ರ.—ಸ್ವಾಮಿ, ಈ ಚೀಫ್ ಪರ್ಸನಲ್ ಮ್ಯಾನೇಜರ್ ಹುದ್ದೆಗೆ ಅರ್ಜಿಯನ್ನು ಕರೆದಿರತಕ್ಕಂಥ ದಿನಾಂಕ ಏನಾದರೂ ತಮ್ಮ ಹತ್ತಿರ ಇದೆಯೇ ? ಅಲ್ಲಿ ಈ ಪೋಸ್ಟನ್ನು ಕ್ರಿಯೇಟ್ ಮಾಡಿದಮೇಲೆ ಎಷ್ಟು ವರ್ಷಗಳ ನಂತರ ಅದಕ್ಕೆ ಅಡ್ವರ್‌ಟೈಸ್‌ಮೆಂಟ್ ಮಾಡಿದ್ದೀರಿ ? ಮತ್ತು ಆ ಹುದ್ದೆಗೆ ಇರತಕ್ಕಂಥ ಕ್ವಾಲಿಫಿಕೇಷನ್ಸ್ ಏನು ?

ಶ್ರೀ ಕೆ. ಯಂಕಟಪ್ಪ (ತೋಟಗಾರಿಕೆ ರಾಜ್ಯ ಮಂತ್ರಿಗಳು) (ಸಣ್ಣ ನೀರಾವರಿ ಮತ್ತು ಸಾರಿಗೆ ಸಚಿವರ ಪರವಾಗಿ).—ಸ್ವಾಮಿ, ನೋಟಿಫಿಕೇಷನ್ ನಂ. ಖ/೮೦ ದಿನಾಂಕ ೩-೧೧-೧೯೮೦ ರಲ್ಲಿ ಆ ಹುದ್ದೆಗೆ ಅಡ್ವರ್‌ಟೈಸ್‌ಮೆಂಟ್ ಮಾಡಿರತಕ್ಕಂಥಾದ್ದು ಇದೆ. ಒಂದುಸಾರಿ ೩-೧೨-೮೦ರ ವರೆಗೆ ವೇಳೆ ಕೊಟ್ಟಿತ್ತು. ಅನಂತರ ೩-೧೦-೧೯೮೧ರ ವರೆಗೆ ಎಕ್ಸ್‌ಟೆಂಡ್ ಮಾಡಲಾಯಿತು. ಆ ಹುದ್ದೆಗೆ ಕ್ವಾಲಿಫಿಕೇಷನ್ಸ್ ಇರತಕ್ಕಂಥಾದರಲ್ಲಿ ೩ ವಿಧ ಇದೆ. ಇದರಲ್ಲಿ ಅಭ್ಯರ್ಥಿಗಳಿಗೆ ಮೊದಲನೆಯದಾಗಿ

ಪರ್ಸನಲ್ ಮ್ಯಾನೇಜ್‌ಮೆಂಟಿನಲ್ಲಿ ಡಿಪ್ಲೊಮೋ ಆಗಿರಬೇಕು ಮತ್ತು ಎರಡನೆಯದಾಗಿ ಅವರು ಪದವೀಧರರಾಗಿರಬೇಕು ಮತ್ತು ಕೊನೆಯಪಕ್ಷ ಈ ಪರ್ಸನಲ್ ಮ್ಯಾನೇಜ್‌ಮೆಂಟ್‌ನಲ್ಲಿ ೫–೧೦ ವರ್ಷಗಳ ಅನುಭವವನ್ನು ಹೊಂದಿರಬೇಕು.

ಶ್ರೀ ಟಿ.ಬಿ. ಜಯಚಂದ್ರ,—ಪೋಸ್ಟನ್ನು ಕ್ರಿಯೇಟ್ ಮಾಡಿದ್ದು ಯಾವಾಗ ? ಅದನ್ನು ಮಾನ್ಯ ಮಂತ್ರಿಯವರು ಹೇಳಲಿಲ್ಲ.

ಅಧ್ಯಕ್ಷರು.—ಆ ಹುದ್ದೆ ವಿಚಾರದಲ್ಲಿ ನೋಟಿಫಿಕೇಷನ್ ಆಗಿರುವ ಬಗ್ಗೆ ಅವರು ಹೇಳಿದ್ದಾರಲ್ಲ.

ಶ್ರೀ ಕೆ. ಯಂಕಟಪ್ಪ.—ಈಗಾಗಲೇ ನಾನು ನೋಟಿಫಿಕೇಷನ್ ಆದ ಬಗ್ಗೆ ಹೇಳಿದ್ದೇನೆ.

ಶ್ರೀ ಟಿ. ಬಿ. ಜಯಚಂದ್ರ.—ಆ ಪೋಸ್ಟ್ ಕ್ರಿಯೇಟ್ ಮಾಡಿದ್ದು ಯಾವಾಗ ಎಂಬುದರ ಬಗ್ಗೆ ಒಂದು ಮಾತನ್ನೂ ಹೇಳಲಿಲ್ಲ.

ಅಧ್ಯಕ್ಷರು.—ಸಧ್ಯಕ್ಕೆ ಆ ಬಗ್ಗೆ ಡೇಟ್ ಇಲ್ಲ ಎಂದು ಹೇಳಿದ್ದಾರೆ. He wants notice.

ಶ್ರೀ ಟಿ. ಬಿ. ಜಯಚಂದ್ರ.—ಈಗ ಆ ಹುದ್ದೆಗಾಗಿ ಬಂದಿರತಕ್ಕಂಥ ಅರ್ಜಿಗಳು ಇದೆಯಲ್ಲ, ಆ ಅರ್ಜಿಗಳಲ್ಲಿ ನೀವು ಹೇಳಿರತಕ್ಕಂಥ ಕ್ವಾಲಿಫಿಕೇಷನ್ಸ್ ಯಾರಿಗೂ ಇಲ್ಲವೇ ?

ಶ್ರೀ ಕೆ. ಯಂಕಟಪ್ಪ.—ಮಾನ್ಯ ಅಧ್ಯಕ್ಷರೇ, ಈ ಹುದ್ದೆಗೆ ೨೭ ಅರ್ಜಿಗಳು ಬಂದಿದೆ. ಅವುಗಳಲ್ಲಿ ಯಾರಿಗೂ ನಾನು ಹೇಳಿದಂಥ ೩ ವಿಧವಾದ ಅರ್ಹತೆ ಇಲ್ಲದೇ ಇರುವುದರಿಂದ ಅದನ್ನು ಮುಂದಕ್ಕೆ ಹಾಕಿದ್ದೇವೆ.

ಶ್ರೀ ಟಿ. ಬಿ. ಜಯಚಂದ್ರ.—ಸ್ವಾಮಿ, ನಾನು ಹೇಳತಕ್ಕಂಥದ್ದು ಏನೆಂದರೆ ಆ ಅರ್ಹತೆಗಳು ಇರತಕ್ಕಂಥವರು ಅನೇಕ ಜನ ಇದ್ದಾರೆ. ಆದರೆ ಈ ಕಾರ್ಪೊರೇಷನ್ ದೃಷ್ಟಿಯಲ್ಲಿ ಯಾವುದೇ ಒಬ್ಬ ವ್ಯಕ್ತಿಯನ್ನು ಆ ಹುದ್ದೆಗೆ ಅಪಾಯಿಂಟ್ ಮಾಡಬೇಕೆಂದು ಹೇಳಿ ಈ ರೀತಿ ಮಾಡುತ್ತಿದ್ದಾರೆ. ನಾನು ಕೇಳಿರತಕ್ಕಂಥ ಕ್ವಾಲಿಫಿಕೇಷನ್ಸ್‌ಗಿಂತ ಉತ್ತಮವಾದ ಕ್ವಾಲಿಫಿಕೇಷನ್ಸ್ ಇರತಕ್ಕಂಥ ಜನರು ನಮ್ಮಲ್ಲಿ ಇದ್ದಾರೆ. ಅವರ ಬಗ್ಗೆ ನೀವು ವಿಚಾರ ಮಾಡಿ ನೋಡುತ್ತೀರಾ ?

ಶ್ರೀ ಕೆ. ಯಂಕಟಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಈ ಬಗ್ಗೆ ಈಗಾಗಲೇ ಹೇಳಿದ್ದೇನೆ. ನಾನು ಆಗಲೇ ಹೇಳಿದಂತೆ ೩ ವಿವಿಧ ಅರ್ಹತೆಯುಳ್ಳವರನ್ನು ನಾವು ಕೇಳಿದ್ದೇವೆ. ಅವರು ಪರ್ಸನಲ್ ಮ್ಯಾನೇಜ್‌ಮೆಂಟ್‌ನಲ್ಲಿ ಡಿಪ್ಲೊಮೋ ಪಡೆದಿರಬೇಕು, ಅವರು ಪದವೀಧರರಾಗಿರಬೇಕು ಮತ್ತು ಪರ್ಸನಲ್ ಮ್ಯಾನೇಜ್‌ಮೆಂಟ್‌ನಲ್ಲಿ ೫–೧೦ ವರ್ಷಗಳ ಅನುಭವ ಹೊಂದಿರಬೇಕು ಈ ಮೂರು ಅರ್ಹತೆಗಳು ಏನಿದೆ ಇವು ೨೭ ಜನರಲ್ಲಿ ಇಲ್ಲದೇ ಇರುವುದರಿಂದ ಆ ಅಡ್ವರ್‌ಟೈಸ್‌ಮೆಂಟ್ ನೋಟಿಫಿಕೇಷನ್ನನ್ನು ಮುಂದಕ್ಕೆ ಹಾಕಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ.—ನೀವು ಆ ಹುದ್ದೆಗೆ ರೀ–ಅಡ್ವರ್‌ಟೈಸ್‌ಮೆಂಟ್ ಮಾಡಿ ಅರ್ಜಿಗಳನ್ನು ಕರೆದು ಇದನ್ನು ಆದಷ್ಟು ಬೇಗ ಫೈನಲೈಸ್ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಇನ್ನು ಈ ಬಗ್ಗೆ ನಿಧಾನ ಮಾಡಿ ಕಾರ್ಪೊರೇಷನ್ ದೃಷ್ಟಿಯಲ್ಲಿ ಯಾರಾದರೂ ಆ ಹುದ್ದೆಯಲ್ಲಿಟ್ಟು ಅದರಲ್ಲಿ ಮುಂದುವರಿಸುವುದು ಬೇಡ. ಅದನ್ನು ಎಷ್ಟು ದಿವಸದಲ್ಲಿ ಫೈನಲೈಸ್ ಮಾಡುತ್ತೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕೆ. ಯಂಕಟಪ್ಪ.—ಅದು ಸ್ವಲ್ಪ ವೇಳೆ ತೆಗೆದುಕೊಳ್ಳಬಹುದು.

ಶ್ರೀ ಟಿ. ಬಿ. ಜಯಚಂದ್ರ.—ಆ ಹುದ್ದೆಗೆ ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ಇನ್ನು ಎಷ್ಟು ದಿವಸ ಬೇಕು ಅಥವಾ ಎಷ್ಟು ವರ್ಷ ಬೇಕು ? ಇದಕ್ಕೆ ಮಾನ್ಯ ಮಂತ್ರಿಯವರು ಉತ್ತರ ಕೊಡಬೇಕು.

(ಉತ್ತರ ಇಲ್ಲ)

SRI C. M. ARUMUGHAM.—I would like to know how many out of 27 applicants fulfilled the condition of experience i.e., 5/10 years of service. Will the Government consider to direct the K.S.R.T.C. to relax the condition of 'experience'?

SRI K. YEN.:ATAPPA.—I have given the information as to the required qualifications. None of the applicants fulfilled the prescribed qualifications. We can ask the K.S.R.T.C. to re-advertise and see whether some relaxation could be made.

Population of Udupi Taluk in Dakshina Kannada

97 SRI ANANDA KUNDA HEGDE (Brahmavar).—Will the Minister for Revenue be pleased to state :

(a) whether it is not a fact that the population of Udupi Taluk in Dakshina Kannada District has exceeded six lakhs ;

(b) whether it is not a fact, that it is reported that only one Tahsildar is unable to manage the administration of the said Taluk ;

(c) whether it is a fact that Brahmavar has be formed as a separate taluk as per the Vasudeva Rao Committee's Report ;

(d) the action taken by the Government in this regard ?

SRI MALLIKARJUN M KHARGE (Minister for Revenue).—

(a) The population of Udupi Taluk has not exceeded six lakhs. The population of Udupi Taluk is yet to be published by the Census Commissioner as per the enumeration of census of 1981 by the Government of India.

(b) No report has been received by the Government in this regard.

(c) No.

(d) This question does not arise.

ಶ್ರೀ ಆನಂದಕುಂದ ಹೆಗ್ಗಡೆ.—ಸ್ವಾಮಿ, ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಡುಪಿ ಮತ್ತು ಬ್ರಹ್ಮಾವರ ತಾಲ್ಲೂಕುಗಳಲ್ಲಿ ಜನಸಂಖ್ಯೆ ೬ ಲಕ್ಷವನ್ನು ಸಮೀಪಿಸುತ್ತಿದೆ. ಶ್ರೀ ವಾಸುದೇವ ರಾವ್ ಸಮಿತಿಯವರು ಅವು ಸೆಪರೇಟ್ ತಾಲ್ಲೂಕು ಆಗಬೇಕಾಗಿದೆ ಎಂದು ಹೇಳಿದ್ದಾರೆ. ಈಗ ಆಲ್ಲಿ ಒಬ್ಬರೇ ತಹಶೀಲ್ದಾರರು ಕೆಲಸ ಮಾಡುತ್ತಿದ್ದಾರೆ. ಎಲ್ಲಾ ಸವಲತ್ತನ್ನು ಪಡೆಯುವ ದೃಷ್ಟಿಯಿಂದ ಜನತೆಗೆ ಬಹಳ ಕಷ್ಟವಾಗಿದೆ. ಈ ಸಮಸ್ಯೆ ಬಹಳ ದೀರ್ಘಕಾಲದ್ದಾಗಿದೆ. ಈ ಬಗ್ಗೆ ಸರ್ಕಾರದವರು ತೀವ್ರವಾಗಿ ಗಮನಹರಿಸಬೇಕು ಎಂದು ನಾವು ಎಷ್ಟೋ ಸಾರಿ ಕೇಳಿಕೊಂಡಿದ್ದೇವೆ. ಮಾನ್ಯ ಮಂತ್ರಿಯವರು ೧೯೮೧ರ ಜನಗಣತಿಯು ಅವರ ಕೈಗೆ ಮುಟ್ಟಲಿಲ್ಲ ಎಂದು ಹೇಳಿದ್ದಾರೆ. ಈ ಉಡುಪಿ ತಾಲ್ಲೂಕಿನ ಜನಸಂಖ್ಯೆ ೬ ಲಕ್ಷ ಮುಟ್ಟುತ್ತಿರುವುದರಿಂದ ಇದನ್ನು ತೀವ್ರವಾಗಿ ಪರಿಗಣಿಸುತ್ತೀರಾ ಎಂದು ನಾನು ಕೇಳುತ್ತೇನೆ.